# <u>ಹಿರಿಯ ಸಿವಿಲ್?ನ್ಯಾಯಾಧೀಶರು  ಮತ್ತು ಜೆ.ಎಂ.ಎಫ್?ಸಿ., ಚಳ್ಳಕೆರೆ.</u>

## <u>ಸಿ.ಸಿ ನಂ.614/2020</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಹೆಚ್.ಡಿ. ತಿಪ್ಪೇಸ್ವಾಮಿ | ಪಿ.ಡಬ್ಲ್ಯೂ: 07 |
| ತಂದೆಯ ಹೆಸರು | : | ದಾಸನಾಯಕ | ಸಿ.ಡಬ್ಲ್ಯೂ: 07 |
| ವಯಸ್ಸು | : | ಸು. 53 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸ | : | ಹರ್ತಿಕೋಟೆ ಗ್ರಾಮ. ಹಿರಿಯೂರು ತಾ. | |

ದಿನಾಂಕ 22.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### <u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಸಾಕ್ಷಿಗೆ ನಿಪಿಃ 4 ಮಾಲು ಬಿಡುಗಡೆ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿಕೊಂಡಿದ್ದು ಅದನ್ನು ನಿಪಿಃ 4(ಸಿ) ಅಂತ ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ 6-7 ವರ್ಷಗಳ ಹಿಂದೆ ಚಿತ್ರದುರ್ಗದ ಪ್ರವಾಸಿ ಮಂದಿರದ ಮುಂದೆ ಪೊಲೀಸರು ನನ್ನ ಸಹಿ ಪಡೆದಿದ್ದರು ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ಮಹಜರಿಗೆ ಎಂದು ಪಡೆದಿದ್ದರು. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಬಿಡುಗಡೆ ಮಾಡಿಲ್ಲ. ನನ್ನನ್ನು ಎಲ್ಲಿಗೂ ಕರೆಸಿಲ್ಲ.

ಸಾಕ್ಷಿಗೆ ನಿಪಿಃ 5 ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿಕೊಂಡಿರುತ್ತಾರೆ. ಸದರಿ ಭಾವಚಿತ್ರವನ್ನು ಎಲ್ಲಿ ಮತ್ತು ಏತಕ್ಕಾಗಿ ತೆಗೆದಿರುತ್ತಾರೆ ಅಂತ ನನಗೆ ಗೊತ್ತಿಲ್ಲ.

<u>**(ಈ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿಸಿದೆ)**</u>

**<u>ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ದಿಃ 02.01.2018 ರಂದು ಚಿತ್ರದುರ್ಗ ನಗರ ವೃತ್ತ ಕಚೇರಿಯಲ್ಲಿ ನನ್ನ ಮತ್ತು ಚಾಸಾ. 8 ರವರ ಸಮಕ್ಷಮ, ಬಡಾವಣಾ ಪೊಲೀಸ್? ಠಾಣೆ ಮೊಕದ್ದಮೆ ಸಂಖ್ಯೆಃ 12/2017 ಕಲಂ 380 ಪಿ.ಎಫ್. ನಂ. 12/2017 ರಲ್ಲಿನ ಕ್ರಮ ಸಂಖ್ಯೆಃ 6 ರಿಂದ 15 ರವರೆಗಿನ ಮಾಲುಗಳನ್ನು ವಾರಸುದಾರರಿಗೆ ಬಿಟ್ಟುಕೊಡಲು ಮಾನ್ಯ ಚಿತ್ರದುರ್ಗ ಪ್ರಧಾನ ಸಿವಿಲ್? ನ್ಯಾಯಾಲಯ(ಹಿ.ವಿ.) ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಆದೇಶವಾಗಿದ್ದರ ಮೇರೆಗೆ ಚಾಸಾ. 18 ರವರು ನಮ್ಮನ್ನು ಕರೆಸಿದ ಮೇರೆಗೆ ನಾವು ಠಾಣೆಗೆ ಹಾಜರಾಗಿದ್ದು, ಆ ಸಮಯದಲ್ಲಿ ಸದರಿ ವಸ್ತುಗಳನ್ನು ವಾರಸುದಾರರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿಃ 4 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಸಮಯದಲ್ಲಿ ನಿಪಿಃ 5 ರಂತೆ ಭಾವಚಿತ್ರ ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿಃ 4 ಮತ್ತು 5 ಕ್ಕೆ ಸಂಬಂಧಿಸಿದಂತೆ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿತನ ಪರ ವಕೀಲರಿಂದಃ</u>**

ಪಾಟೀ ಸವಾಲು ಇರುವುದಿಲ್ಲ

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.